ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 27-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನೀವಾಗಲೀ, ನಿಮ್ಮ ಅಣ್ಣನಾಗಲೀ, ನಿಮ್ಮ ತಾಯಿಯಾಗಲೀ ಮತ್ತೊಬ್ಬ ಸಹೋದರಾನಾಗಲೀ ವೈಯಕ್ತಿಕವಾಗಿ ಆದಾಯವನ್ನು ಅಸೆಸ್ ಮಾಡಿ ನಿರ್ಧರಣೆ ಮಾಡಿದ್ದಿರೋ ಅಥವಾ ಒಟ್ಟು ಕುಟುಂಬದ ಪರವಾಗಿ ಅಸೆಸ್ ಮಾಡಿ ನಿರ್ಧರಣೆ ಮಾಡಿಕೊಂಡಿದ್ದೀರೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2020 ರವರೆಗೆ ಒಂದನೇ ಪ್ರತಿವಾದಿ ನನ್ನ ಅಣ್ಣ ಹೇಗೆ ಅಸೆಸ್ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ . ಈಗ ನೀವು ಆದಾಯ ತೆರಿಗೆ ಇಲಾಖೆಗೆ ತೆರಿಗೆ ನಿರ್ಧರಣೆಯನ್ನು ವೈಯಕ್ತಿಕವಾಗಿ ಮಾಡಿದ್ದಿರೋ ಅಥವಾ ಒಟ್ಟು ಕುಟುಂಬದ ಪರವಾಗಿ ತೆರಿಗೆ ನಿರ್ಧರಣೆ ಮಾಡಿದಿರೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2020 ನಂತರ ವೈಯಕ್ತಿಕವಾಗಿ ನಿರ್ಧರಣೆ ಮಾಡಿದ್ದೇನೆ ಎಂದು ತಿಳಿಸಿರುತ್ತಾರೆ. ಈ ಕೇಸು ಹಾಕುವಾಗ ಮೇಲೆ ಹೇಳಿದಂತೆ ಒಟ್ಟು ಕುಟುಂಬಂದ ಪರವಾಗಿ ತೆರಿಗೆ ನಿರ್ಧರಣೆ ಮಾಡಲಾಗಿದೆಯೊೀ ಅಥವಾ ಒಬ್ಬ ಒಬ್ಬರು ತೆರಿಗೆ ನಿರ್ಧರಣೆ ಮಾಡಿ ಸಲ್ಲಿಸಲಾಗಿದೆಯೊೀ ಎಂಬ ಬಗ್ಗೆ ದಾಖಲೆಗಳನ್ನು ಪರಿಶೀಲನೆ ಮಾಡಿ ನೋಡಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೋಡಿಲ್ಲ ಎಂದು ತಿಳಿಸಿರುತ್ತಾರೆ . ನಾನು ಯಾವುದೇ ದಾಖಲೆಗಳನ್ನು ಮತ್ತು ವಿಷಯಗಳನ್ನು ಸರಿಯಾಗಿ ಪರಿಶೀಲಿಸದೇ ಆದಾರ ರಹಿತವಾಗಿ ಎಲ್ಲಾ ಆಸ್ತಿಗಳು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಕುಟುಂಬದ ಹಣ ಯಾವುದು ಮತ್ತು ಎಷ್ಟು ಹಣ ಇತ್ತು ಎಂದು ಪರೀಲನೆ ಮಾಡಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲವೂ ಕುಟುಂಬದ ಹಣ ಎಂದು ತಿಳಿಸಿರುತ್ತಾರೆ. ಕುಟುಂಬದ ಹಣ ಎಂದು ಹೇಳಲು ದಾಖಲೆಗಳ ಆದಾರ ಇದೆಯಾ

ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆಸ್ತಿ ಖರೀದಿಸಿರುವುದೇ ದಾಖಲೆ ಎಂದು ತಿಳಿಸಿರುತ್ತಾರೆ. ಐಟಂ ನಂ 5 ರಲ್ಲಿ ಒಂದನೇ ಪ್ರತಿವಾದಿ 3 ಲಕ್ಷ ಹಣ ಖರ್ಚು ಮಾಡಿ ವಾಚ್‌ಮೆನ್ ಶೆಡ್ ನಿರ್ಮಿಸಿದ್ದಾರೆ ಎಂದರೆ ಸಾಕ್ಷಿ ವಾಚ್‌ಮೆನ್ ಶೆಡ್ ನಿರ್ಮಿಸಲು 80000 ಖರ್ಚು ಆಗಿದೆ ಮತ್ತು ಅದು ಕುಟುಂಬದ ಹಣ ಎಂದು ತಿಳಿಸಿರುತಾರೆ . ವಾಚ್‌ಮೆನ್ ಶೆಡ್ ನ್ನು 2020 ರಲ್ಲಿ ನಿರ್ಮಿಸಲಾಗಿದೆ . ಐಟಂ ನಂ 5 ರ ಸ್ವತ್ತನ್ನು ಖರೀದಿಸಿದ ಲಗಾಯಿತು ವಾಚ್‌ಮೆನ್ ಗೆ ಪ್ರತಿ ತಿಂಗಳು ರೂ 12000 ಸಂಭಳ ಕೊಡಲಾಗುತ್ತಿದೆ ಎಂದರೆ ಸಾಕ್ಷಿ ಖರೀದಿಸಿದ ದಿನಾಂಕದಿಂದ ವಾಚ್‌ಮೆನ್ ನೇಮಿಸಿಕೊಂಡಿರಲಿಲ್ಲ ಈಗ 2 ವರ್ಷಗಳಿಂದ ಐಟಂ ನಂ 5 ರ ಸ್ವತ್ತನ್ನು ನೋಡಿಕೊಳ್ಳಲು ಒಬ್ಬರನ್ನು ನೇಮಿಸಿ ಅವರಿರಗೆ ಶೆಡ್ ನಿರ್ಮಿಸಿ ಕೊಡಲಾಗಿದೆ, ಆದರೇ ಅವರು ಬೇರೆ ಕಡೆ ಕೆಲಸ ಹೋಗುತ್ತಾರೆ ಎಂದು ತಿಳಿಸಿರುತ್ತಾರೆ. ವಾಚ್‌ಮೆನ್ ನ ಹೆಸರು ನೆನಪಾಗುತ್ತಿಲ್ಲ. ವಾಚ್‌ಮೆನ್ ನ ನೇಮಕವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ . ವಾಚ್‌ಮೆನ್ ಬೇರೆ ಕಡೆ ಕೂಲಿ ಕೆಲಸಕ್ಕೆ ಹೋಗುತ್ತಾನೆ. ಎಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಾನೆ ಎಂದು ಆತನನ್ನು ಕೇಳಿ ಹೇಳಬೇಕಾಗುತ್ತದೆ. ಐಟಂ ನಂ 5 ರ ಸ್ವತ್ತಿನ ಬಗ್ಗೆ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಲಯದಲ್ಲಿ ಮತ್ತು ಬೆಂಗಳೂರಿನ ನ್ಯಾಯಲಯದಲ್ಲಿ ಎಷ್ಟು ಪ್ರಕರಣ ದಾಖಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಈಗ್ಗೆ 2 ತಿಂಗಳ

ಹಿಂದೆ ಮಾಲೀಕರ ವಿರುದ್ಧ ಕೇಸು ಹಾಕಿರುತ್ತಾರೆ . ಆದರೇ ಒಟ್ಟು ಕೇಸು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ . ಐಟಂ ನಂ 5 ರ ಸ್ವತ್ತಿನಲ್ಲಿ ಏನು ಏನು ಅಭಿವೃದ್ದಿ ಮಾಡಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾವುದೇ ಅಭಿವೃದ್ದಿ ಮಾಡಿಲ್ಲ ಎಂದು ತಿಳಿಸಿ, ಅದರ ಮೈದಾನವನ್ನು ಸಮತಟ್ಟು ( Level ) ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಐಟಂ ನಂ 5 ರ ಸ್ವತ್ತಿನಲ್ಲಿ ಒಂದು ದೊಡ್ಡ ಬೋರ್ ವೆಲ್ , ವಾಟರ್ ಟ್ಯಾಂಕ್ ಮತ್ತು ಪಂಪ್ ಸೆಟ್ ಇದೆ ಎಂದರೆ ಸಾಕ್ಷಿ ಬೋರ್ವೆಲ್ ಮತ್ತು ವಾಟರ್ ಟ್ಯಾಂಕ್ ಖರೀದಿ ಮಾಡುವಾಗಲೇ ಇತ್ತು ಎಂದು ತಿಳಿಸಿರುತ್ತಾರೆ. ಪಂಪ್ ಸೆಟ್ ಯಾವುದು ಎಂದು ನೆನಪಾಗುತ್ತಿಲ್ಲ. Electricity Connection ನ್ನು ಯಾರು ತೆಗೆದುಕೊಂಡಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮೊದಲೇ ಇತ್ತು ಅದು Disconnect ಆಗಿತ್ತು, ಈಗ ಒಂದನೇ ಪ್ರತಿವಾದಿ ನನ್ನ ಅಣ್ಣ ತೆಗೆದುಕೊಂಡಿರುತ್ತಾರೆ . Electricity Connection ನ RR Number ನನಗೆ ಗೊತ್ತಿಲ್ಲ. ಐಟಂ ನಂ 5 ಸ್ವತ್ತು ತೆಗೆದುಕೊಳ್ಳುವಾಗ ಬೇರೆ ಏನು ಅಭಿವೃದ್ದಿ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹುಲ್ಲು ಬೆಳೆದಿತ್ತು ಎಂದು ತಿಳಿಸಿರುತ್ತಾರೆ . ನಾವು ತೆಗೆದುಕೊಂಡ ನಂತರ BDA ರವರು ರಿಟೈನಿಂಗ್ ವಾಲ್ ಕಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ . ಐಟಂ ನಂ 5 ರ ಸ್ವತ್ತು ಖರೀದಿ ಮಾಡುವಾಗ ಅದಕ್ಕೆ

ಯಾವುದೇ ರಸ್ತೆ ಇರಲಿಲ್ಲ ಆದರೇ ಪಕ್ಕದಲ್ಲಿ ಲೇ ಔಟ್ ಮಾಡುತಿದ್ದವರು 80 ಅಡಿ ರಸ್ತೆಯನ್ನು ಅರ್ಧ ಮಾಡಿದ್ದರು ಮತ್ತು ಇತರೇ ಲೇ ಔಟ್ ನವರು 40 ಅಡಿ ವಿಸ್ತೀರ್ಣದ ರಸ್ತೆಯನ್ನು 2-3 ಕಡೆ ಬಿಡುವುದಾಗಿ ತೋರಿಸಿದ್ದರು ಎಂದು ತಿಳಿಸಿ, ಐಟಂ ನಂ 5 ರ ಸ್ವತ್ತನ್ನು ಖರೀದಿ ಮಾಡುವಾಗ ರಸ್ತೆ ಇತ್ತು ಎಂದು ತಿಳಿಸಿರುತ್ತಾರೆ. ಐಟಂನಂ 5 ರ ಸ್ವತ್ತುಗಳನ್ನು ಖರೀದಿ ಮಾಡುವಾಗ ಚರಂಡಿ ಇರಲಿಲ್ಲ ಈಗ BDA ರವರು ಮಾಡಿರುತ್ತಾರೆ . BDA ರವರು ಚರಂಡಿ ಮಾಡಿದ ಬಗ್ಗೆ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ BDA ರವರನ್ನೇ ಕೇಳಬೇಕು ಎಂದು ತಿಳಿಸಿರುತ್ತಾರೆ. ಒಂದನೇ ಪ್ರತಿವಾದಿ ನನ್ನ ಅಣ್ಣನೇ ಚರಂಡಿ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ . ಅದಕ್ಕೆ Slab ಗಳನ್ನು ಮಾತ್ರ ನಾವು ಹಾಕಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. BDA ರವರು ರಸ್ತೆ ಮಾಡಿದಾಗ ಅಂದರೆ 2000 ರಲ್ಲಿ ನಾವು Slab ಗಳನ್ನು ಮಾಡಿಸಿರುತ್ತೇವೆ . ಸಾಕ್ಷಿ ಮುಂದುವರಿದು ಚರಂಡಿ ಅಲ್ಲಿ ಮೊದಲೇ ಇತ್ತು ಅದಕ್ಕೆ ಕಲ್ಲು ಮಾತ್ರ BDA ರವರು ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ . ನಾವು ನೇರ ರಸ್ತೆಯಿಂದ ನಮ್ಮ ಜಮೀನಿಗೆ ತಿರುಗುವ ಸ್ಥಳದಲ್ಲಿ ಮಾತ್ರ Slab ನ್ನು ಹಾಕಿಸಿರುತ್ತೇವೆ ಎಂದು ತಿಳಿಸಿರುತಾರೆ . Slab ಗಳನ್ನು ಹಾಕಿಸಲು ಎಷ್ಟು ಖರ್ಚು ಆಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲವನ್ನು ಒಂದನೇ ಪ್ರತಿವಾದಿ ನನ್ನ

ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ಐಟಂ ನಂ 5 ಸ್ವತ್ತು ಖರೀದಿ ಮಾಡುವ ಸಮಯದಲ್ಲಿ ಖಾಲಿ ಜಮೀನು ಆಗಿತ್ತು ಸಾಕ್ಷಿ ಮುಂದುವರಿದು ಹುಲ್ಲು ಬೆಳೆದುಕೊಂಡಿತ್ತು ಎಂದು ತಿಳಿಸಿರುತ್ತಾರೆ . ಐಟಂ ನಂ 5 ರ ಸ್ವತ್ತಿಗೆ ಒಂದನೇ ಪ್ರತಿವಾದಿ ನನ್ನ ಅಣ್ಣ ಒಂದು ಕಡೆ ಕಲ್ಲಿನ ಕಾಂಪೌಂಡ್ ಮತ್ತು ಉಳಿದ 3 ಕಡೆ ಸರಿಗೆ ಬೇಲಿ ಹಾಕಿದ್ದರು ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು BDA ರವರು ರಿಟೈನಿಂಗ್ ವಾಲ್ ಹಾಕಿದ್ದರು ನಾವು ಕಲ್ಲುಕಂಭ ಮಾತ್ರ ಹಾಕಿದ್ದೆವು. ಸರಿಗೆ ಬೇಲಿಯನ್ನು ಯಾವಾಗ ಹಾಕಿಸಲಾಯಿತು ಎಂದು ನಿರ್ದಿಷ್ಟವಾಗಿ ನೆನಪಿಲ್ಲ 2007-08 ರಲ್ಲಿ ಹಾಕಿರಬಹುದು. ಸರಿಗೆ ಬೇಲಿ ಹಾಕಿಸಲು ಎಷ್ಟು ಖರ್ಚು ಆಯಿತು ಎಂದು ನನಗೆ ಗೊತಿಲ್ಲ, ಕಾರಣ ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು. ಕಲ್ಲಿನ ಕಂಭಕ್ಕೆ 3 ಲಕ್ಷ ಮತ್ತು ಸರಿಗೆ ಬೇಲಿಗೆ 4 ಲಕ್ಷ ಹಣ ಖರ್ಚು ಆಗಿದೆ ಎಂದರೆ ಸರಿಯಲ್ಲ.   ಐಟಂ ನಂ 5 ರ ಸ್ವತ್ತಿಗೆ ಕಂದಾಯ , ಸ್ವಚ್ಚಗೊಳಿಸಲು ಮತು ಇತರೇ ಖರ್ಚು ವೆಚ್ಚಗಳು ಮತ್ತು ವಾಚ್ ಮೆನ್ ಸಂಭಳ ಸೇರಿ ಒಟ್ಟು ಎಷ್ಟು ಖರ್ಚು ಆಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಒಂದನೇ ಪ್ರತಿವಾದಿ ನನ್ನ ಅಣ್ಣ ನೋಡಿಕೊಳ್ಳುತಿದ್ದರು ನಾವು ಕೇಳಿದರೂ ಅವರು ಸರಿಯಾಗಿ ಲೆಕ್ಕ ಕೊಡುತಿರಲಿಲ್ಲ ಎಂದು ತಿಳಿಸಿರುತ್ತಾರೆ. ಐಟಂ ನಂ 5 ರ ಸ್ವತ್ತನ್ನು ನೋಡಿಕೊಳ್ಳಲು

ವಾರ್ಷಿಕವಾಗಿ ಒಂದನೇ ಪ್ರತಿವಾದಿ 4 ಲಕ್ಷಕ್ಕಿಂತ ಜಾಸ್ತಿ ಖರ್ಚು ಮಾಡುತ್ತಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.